ಸಾಕ್ಷಿಯನ್ನು ದಿಃ 17-12-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜೆ.ಡಿ.ಡಿ ಪ್ರತಿವಾದಿ ಪರ ವಕೀಲರಿಂದ

ನನ್ನ ತಂದೆ ಮಾಗಳ ಹಳ್ಳಿಯಲ್ಲಿ ವಾಸ ಇರುತ್ತಾರೆ. ಅವರು ಅನಾರೋಗ್ಯದಿಂದ ಬಳಲುತ್ತೀರುವುದರಿಂದ ಯಾವುದೇ ಕೆಲಸ ಮಾಡುವುದಿಲ್ಲ. ನನ್ನ ತಂದೆಗೆ ಪಾಶ್ವವಾರ್ಯು ಆಗಿದ್ದು ನಡೆದಾಡಲು ಆಗದ ಕಾರಣ ನನಗೆ ಮುಕ್ತಿಯಾರ ನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದು ದಾಖಲೆಯಲ್ಲಿ ನಮೂದು ಆಗಿರುತ್ತದೆ. ನನ್ನ ತಂದೆ ಸತ್ಯಾಂಶವನ್ನು ನ್ಯಾಯಲಾಯದಲ್ಲಿ ಹೇಳುತ್ತಾರೆಂಬ ಕಾರಣಕ್ಕೆ ಅವರ ಆರೋಗ್ಯ ಸರಿ ಇದ್ದರೂ ಅನಾರೋಗ್ಯದಿಂದ ಬಳಲುತ್ತಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

2.ಸರ್ವೇ ನಂ. 129 ಮೊದಲಿಗೆ ಮಾರುತಿ ಮಂದಿರಕ್ಕೆ ಸೇರಿದ್ದು ಎಂದರೆ ಸರಿ. ಮಾರುತಿ ದೇವಸ್ಥಾನಕ್ಕೆ 5 ಸದಸ್ಯರ ಕಮಿಟಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಅವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಮೊದಲಿಗೆ ಇತ್ತು ಎಂದು ನುಡಿಯುತ್ತಾರೆ. ನಮ್ಮ ಮನೆತನದ ಮೂಲ ಪುರುಷ ಹನಮಂತಪ್ಪ ಎಂದರೆ ಸರಿ. ಅವರಿಗೆ ಗೋಪಾಲ, ರಾಮಣ್ಣ, ಲಕ್ಷ್ಮಣ, ಲಕ್ಷವ್ವ , ಹುಲಗೆವ್ವ, ಸಾವಕ್ಕ ಎಂಬ ಮಕ್ಕಳು ಇದ್ದರು ಎಂದರೆ ಸರಿ. ಇವರ ಪೈಕಿ ನನ್ನ ತಂದೆಯ ತಂದೆ ಹೆಸರು ಲಕ್ಷ್ಮಣ ಇರುತ್ತದೆ. ಲಕ್ಷ್ಮಣನಿಗೆ ನನ್ನ ತಂದೆ, ಹುಲಗೆವ್ವ, ಬೀಮವ್ವ, ಫಕೀರವ್ವ ಮಕ್ಕಳು ಇದ್ದರು ಎಂದರೆ ಸರಿ. ನಮ್ಮ ಮೂಲ ಪುರಷ ಹನಮಂತಪ್ಪ ಮಾರುತಿ ಮಂದಿರದಲ್ಲಿ ಭಜಂತ್ರಿ ಸೇವೆ ಮಾಡುತ್ತಿದ್ದರು ಎಂದರೆ ಸರಿ. ಹನಮಂತಪ್ಪನಿಗೆ ದಾವಾ ಆಸ್ತಿಯು ಟೆನನ್ಸಿ ಮೂಖಾಂತರ ಬಂದಿರುತ್ತದೆ ಎಂದರೆ ಸರಿ. ದಿಃ 13.11.1983 ರಲ್ಲಿ ಡ ನಂ. 1234 ಅಡಿಯಲ್ಲಿ ದಾವಾ ಆಸ್ತಿಯು ಹನಮಂತನಿಗೆ ಅನುಭವಕ್ಕೆ ನೀಡಲಾಯಿತು ಎಂದರೆ ಸರಿ. ದಿಃ 01.12.1987 ರಲ್ಲಿ ಹನಮಂತಪ್ಪ ಮೃತಪಟ್ಟರು ಎಂದರೆ ಸರಿ. ಹನಮಂತನ ಮಕ್ಕಳು ಸದರಿ ಸ್ವತ್ತನ್ನು ಹಂಚಿಕೊಂಡ ಬಗ್ಗೆ ನೊಂದಾಯಿತ ಅಥವಾ ಕಾನೂನು ಮಾನ್ಯ ಪಡೆದ ದಾಖಲಾತಿಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಹನಮಂತಪ್ಪ ಆಸ್ತಿಯನ್ನು ಹಂಚಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಅದಕ್ಕೆ

ಸಂಬಂಧಪಟ್ಟ ಕಾಗದ ಪತ್ರ ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಹಾಗೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ Sd/-